

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕರ್ನಾಟಕದ ರಾಜಕೀಯ ಆಗ ಮತ್ತು ಈಗ

“ರಾಜಕೀಯದಲ್ಲಿ ಒಂದು ಸ್ಥಾನ ಪಡೆಯುವುದು ಉದರಪೋಷಣೆಗಲ್ಲ; ಅದು ಶಾಶ್ವತವಾದ ಜೀವನಮಾರ್ಗವೂ ಅಲ್ಲ. ಇಂತಹ ಅವಕಾಶವು ದೊರೆಯುವುದು ಜನಸೇವೆಗೋಸ್ಕರ. ನೈಜವಾದ ಸೇವೆಯನ್ನು ಸಲ್ಲಿಸಿ ಕೃತಾರ್ಥನಾಗಬೇಕೆಂದು ಬಯಸುವವನು ಸ್ವಾರ್ಥ ತ್ಯಾಗ ಮಾಡಲು ಸಿದ್ಧನಾಗಿರಬೇಕು. ಅದಿಲ್ಲದೆ ರಾಜಕೀಯ ಸ್ಥಾನಮಾನವನ್ನು ಸ್ವಾರ್ಥ ಸಾಧನೆಗಾಗಿ ದುರುಪಯೋಗ ಮಾಡಿದರೆ ಅದು ನಂಬಿಕೆದ್ರೋಹವಾಗಿ ಹೀನಕಾರ್ಯವಾಗುತ್ತದೆ.” ಹೀಗೆಂದು ಹೇಳಿದವರು ಚಿತ್ರದುರ್ಗ ಜಿಲ್ಲೆಯ ಹಿರಿಯ ತಲೆಮಾರಿನ ರಾಜಕೀಯ ಧುರೀಣರಾಗಿದ್ದ ಜಗಳೂರಿನ ಜೆ. ಮಹಮದ್ ಇಮಾಂರವರು. 1966 ರಲ್ಲಿ ಅವರು ಬರೆದು ಪ್ರಕಟಿಸಿದ “ಮೈಸೂರು ಆಗ ಮತ್ತು ಈಗ” ಎಂಬ ಪುಸ್ತಕದಲ್ಲಿ ಬರುವ ಈ ಮಾತುಗಳು ಇಂದಿಗೂ ಎಷ್ಟೊಂದು ಪ್ರಸ್ತುತವಾಗಿವೆ. ಅವರು ಈ ಮಾತುಗಳನ್ನು ಕೇವಲ ಲೇಖನಿಯಿಂದ ಬರೆದವರಲ್ಲ; ಆ ಮಾತುಗಳ ಹಿಂದಿನ ಆಶಯದಂತೆ ಬದುಕಿದವರು. ಸಂದರ್ಭ: ಮೈಸೂರು ಮಹಾರಾಜರ ಕಾಲದಲ್ಲಿ ಸಚಿವರಾಗಿದ್ದ ಇಮಾಂರವರು ತಮ್ಮ ನಾಲ್ಕು ವರ್ಷಗಳ ಸಚಿವ ಪದವಿಯ ಅವಧಿಯು ಮುಗಿದ ಮೇಲೆ ಬೆಂಗಳೂರಿನಲ್ಲಿಯೇ ವಸತಿಯನ್ನು ಮಾಡಬೇಕೆಂದು ಅವರ ಸ್ನೇಹಿತರಿಂದ ಬಂದ ಒತ್ತಾಯ. ಬೆಂಗಳೂರಿನಲ್ಲಿಯೇ ಇದ್ದರೆ ಆಗಿಂದಾಗ್ಗೆ ದಿವಾನರನ್ನು, ಇತರೆ ಅಧಿಕಾರಿಗಳನ್ನು ಕಾಣುತ್ತಿರಬಹುದೆಂದೂ, ಅದರಿಂದ ಬೇರೆ ಯಾವುದಾದರೂ ಒಂದು ಪದವಿ ದೊರೆಯಬಹುದೆಂದು ಅವರ ಹಿತೈಷಿಗಳು ಆಶಿಸಿದ್ದರು. ಇಮಾಂರವರಿಗೆ ಸ್ನೇಹಿತರ ಸಲಹೆ ಸರಿತೋರಲಿಲ್ಲ. ಬೆಂಗಳೂರನ್ನು ಬಿಟ್ಟು ಸೀದಾ ಸ್ವಂತ ಊರಾದ ಜಗಳೂರಿಗೆ ಬಂದು ತಮ್ಮ ವ್ಯವಸಾಯ ವೃತ್ತಿಯನ್ನು ಮುಂದುವರಿಸಿದರು.

ಇಮಾಂ ಅವರ ಈ ನಿಸ್ವಾರ್ಥ ಬದುಕಿಗೆ ಪ್ರೇರೇಪಣೆ ಆಗಿನ ಕಾಲದ ಜನರ ಹೃದಯದಲ್ಲಿದ್ದ ಅಪ್ಪಟ ದೇಶಪ್ರೇಮ. ಅವರ ಮಾತಿನಲ್ಲಿಯೇ ಹೇಳುವುದಾದರೆ ಅಂದಿನ ಹಿರಿಯ ರಾಜಕೀಯ ಧುರೀಣರು “ರಾಜಕೀಯದಲ್ಲಿರುವುದು ದೇಶಸೇವೆಗೆ ಒಂದು ಸದವಕಾಶವೆಂದು ಭಾವಿಸಿದ್ದರೇ ಹೊರತು ಅದು ಒಂದು ಜೀವನೋಪಾಯ ಮಾರ್ಗವೆಂದು ಎಣಿಸುತ್ತಿರಲಿಲ್ಲ. ಆದ್ದರಿಂದ ರಾಜಕೀಯದಲ್ಲಿ ಪಾತ್ರ ವಹಿಸಿದವರು ಸ್ವಾರ್ಥತ್ಯಾಗ ಮಾಡಿದರೇ ಹೊರತು ಆಸ್ತಿಯನ್ನಾಗಲಿ, ಐಶ್ವರ್ಯವನ್ನಾಗಲಿ ಸಂಪಾದಿಸಲಿಲ್ಲ. ಈ ಹಿಂದೆ ದೇಶಸೇವೆಯಲ್ಲಿ ನಿರತರಾಗಿದ್ದವರ ಅಥವಾ ಅವರ ವಂಶೀಕರ ಆರ್ಥಿಕಪರಿಸ್ಥಿತಿಯನ್ನು ವಿಮರ್ಶೆ ಮಾಡಿದರೆ ಅವರು ಮಾಡಿದ ತ್ಯಾಗದ ರೀತಿಯು ಚೆನ್ನಾಗಿ ವೇದ್ಯವಾಗುತ್ತದೆ. ಅವರವರ ಕುಟುಂಬದ ಸದ್ಯದ ಆರ್ಥಿಕ ಪರಿಸ್ಥಿತಿಯನ್ನು ಕಂಡು ಯಾರೂ ಕನಿಕರ ಪಡದೆ ಇರಲಾರರು. ಅವರನ್ನು ನಿಜವಾದ ತ್ಯಾಗಿಗಳೆಂದೇ ಹೇಳಬೇಕು. ಇವರು ತಮ್ಮ ರಾಜಕೀಯ ಸ್ಥಾನವನ್ನು ದುರುಪಯೋಗ ಮಾಡಿಕೊಂಡು ಮನೆಮಾರುಗಳನ್ನು ಕಟ್ಟಿಸಲಿಲ್ಲ. ಸರ್ಕಾರಿ ಜಮೀನುಗಳನ್ನು ಸಂಪಾದಿಸಲಿಲ್ಲ. ತಮ್ಮ ಬಂಧುಗಳಿಗೆ ಉನ್ನತ ನೌಕರಿಗಳನ್ನು ಕೊಡಿಸಲಿಲ್ಲ. ಈ ತರದ ನಿಸ್ವಾರ್ಥ ಸೇವೆ, ತ್ಯಾಗ ಮನೋಭಾವವು ಪ್ರಜಾಪ್ರಭುತ್ವ ಬಂದಾಗಿನಿಂದ ದಿನದಿನಕ್ಕೂ ಕ್ಷೀಣವಾಗುತ್ತಾ ಬಂದಿರುವುದು ಶೋಚನೀಯವಾಗಿದೆ.”

ಜೆ. ಮಹಮ್ಮದ್ ಇಮಾಂ ಅವರು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದ ರಾಜಕೀಯದಲ್ಲಿದ್ದವರು. ಸುಮಾರು 30 ವರ್ಷಗಳಿಗೂ ಹೆಚ್ಚು ಕಾಲ ರಾಜ್ಯದ ರಾಜಕೀಯದಲ್ಲಿಯೂ, 5 ವರ್ಷಗಳ ಕಾಲ ಕೇಂದ್ರದ ರಾಜಕೀಯದಲ್ಲಿಯೂ ಸೇವೆ ಸಲ್ಲಿಸಿದವರು. ಜನರು ಪ್ರೀತಿವಿಶ್ವಾಸಗಳಿಂದ ಅವರನ್ನು ‘ಇಮ್ಮಣ್ಣ, ಇಮ್ಮಣ್ಣ’ ಎಂದೇ ಕರೆಯುತ್ತಿದ್ದರು. ಅವರ ತಾತಂದಿರಾದ ಫಕೀರ್ ಸಾಹೇಬರೂ ಮತ್ತು ತಂದೆಯಾದ ಬಡೇಸಾಹೇಬರೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ಸ್ಥಳೀಯ ಸಂಸ್ಥೆಗಳಲ್ಲಿ ಸಾರ್ವಜನಿಕ ಕೆಲಸಗಳನ್ನು ಮಾಡಿ ಜನಾನುರಾಗಿಗಳಾಗಿದ್ದರು. ಇಮಾಂರವರು ಜಗಳೂರಿನ ಪ್ರಪ್ರಥಮ ಮುನಿಸಿಪಲ್ ಅಧ್ಯಕ್ಷರಾಗಿ ನಾಗರೀಕ

ಸೌಲಭ್ಯಗಳನ್ನು ಒದಗಿಸುವಲ್ಲಿ ಹೆಚ್ಚಿನ ಪರಿಶ್ರಮ ವಹಿಸಿದರು. 1936 ರಿಂದ 1940 ರ ಅವಧಿಯಲ್ಲಿ ಚಿತ್ರದುರ್ಗ ಜಿಲ್ಲಾ ಬೋರ್ಡಿನ ಅಧ್ಯಕ್ಷರಾಗಿದ್ದರು. ಮೈಸೂರು ಮಹಾರಾಜರ ಕಾಲದಲ್ಲಿ ಖಾಸಗಿ ಮಂತ್ರಿಗಳಾಗಿ ನೇಮಕಗೊಂಡಿದ್ದ ಅವರು ರೈಲ್ವೆ, ನೀರಾವರಿ, ಲೋಕೋಪಯೋಗಿ, ಶಿಕ್ಷಣ, ಸಹಕಾರ, ಪೋಲೀಸ್, ಕೈಗಾರಿಕೆ ಇತ್ಯಾದಿ ಖಾತೆಗಳನ್ನು ಸಮರ್ಥವಾಗಿ ನಿಭಾಯಿಸಿ ಮಹಾರಾಜರಿಂದ ಮುಷೀರ್-ಉಲ್-ಮುಲ್ಕ್ ಪ್ರಶಸ್ತಿ ಪಡೆದವರು. 1957 ರಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಸ್ಪರ್ಧಿಸಿ ಲೋಕಸಭಾಸದಸ್ಯರಾಗಿದ್ದರು. ಹಿಂದುಳಿದ ಜಿಲ್ಲೆಯಾದ ಚಿತ್ರದುರ್ಗದಲ್ಲಿ ಅನೇಕ ರಸ್ತೆಗಳು, ಸೇತುವೆಗಳು ಮತ್ತು ಕುಡಿಯುವ ನೀರಿನ ಬಾವಿಗಳು ಇತ್ಯಾದಿ ಅನೇಕ ಲೋಕೋಪಯೋಗಿ ಕಾರ್ಯಗಳನ್ನು ಮಾಡಿ ಜನರ ಮೆಚ್ಚುಗೆಗೆ ಪಾತ್ರರಾದರು. ಇಲ್ಲಿ ಬಳಸಿರುವ ಸೇವೆ ಎಂಬ ಪದ ಅಂದಿನ ದಿನಮಾನಗಳ ರಾಜಕೀಯ ಜೀವನಕ್ಕೆ ಅನ್ವಯಿಸುತ್ತದೆಯೇ ಹೊರತು ಈಗಿನ ರಾಜಕೀಯ ಜೀವನಕ್ಕೆ ಅನ್ವಯಿಸುವುದಿಲ್ಲ. ಇಂದಿನ ರಾಜಕೀಯ ದೇಶದ ಸೇವೆಯಾಗಿ ಉಳಿದಿಲ್ಲ, ದೇಶಸೇವೆಯ ಹೆಸರಿನಲ್ಲಿ ಸ್ವಾರ್ಥಸಾಧನೆಗೆ ಇರುವ ಸುಲಭೋಪಾಯವಾಗಿದೆ.

ಅರ್ಧಶತಮಾನದ ಹಿಂದಿನ ರಾಜಕೀಯ ವಿದ್ಯಮಾನಗಳನ್ನು ವಿಶ್ಲೇಷಣೆ ಮಾಡಿ ತಮ್ಮ ಇಳಿವಯಸ್ಸಿನ ಹಿರಿದಾದ ಅನುಭವದಲ್ಲಿ ಲೇಖನಿಸಿದ "ಮೈಸೂರು ಆಗ ಮತ್ತು ಈಗ" ಎಂಬ ಪುಸ್ತಕದಲ್ಲಿರುವ ಕೆಲವು ಪ್ರಮುಖ ಸಂಗತಿಗಳು ಹಾಗೂ ಪ್ರಬುದ್ಧ ವಿಚಾರಗಳನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ:

**ಮಹಾರಾಜರ ಆಳ್ವಿಕೆ ಕುರಿತು:**

- ಮೈಸೂರು ದೇಶವು ಬ್ರಿಟಿಷರ ಕೈಕೆಳಗೆ ಆಶ್ರಿತ ಸಂಸ್ಥಾನವಾಗಿದ್ದಿತು. ಅವರ ಪರವಾಗಿ ಒಬ್ಬ ರೆಸಿಡೆಂಟ್ ಎಂಬ ಆಂಗ್ಲ ಅಧಿಕಾರಿಯು ಬೆಂಗಳೂರಿನಲ್ಲಿರುತ್ತಿದ್ದರು. ಆದರೆ ಮೈಸೂರಿನ ಒಳ ಆಡಳಿತದಲ್ಲಿ ಬ್ರಿಟಿಷರೇ ಆಗಲಿ ರೆಸಿಡೆಂಟರವರೇ ಆಗಲಿ ಪ್ರವೇಶ ಮಾಡುತ್ತಿರಲಿಲ್ಲ. ಮೈಸೂರಿಗೆ ಸ್ವಯಂ ಆಡಳಿತದ ಅಧಿಕಾರವಿದ್ದಿತು.
- ಮೈಸೂರು ಸಂಸ್ಥಾನದ ಆಗಿನ ವಾರ್ಷಿಕ ಆದಾಯ ಮೂರರಿಂದ ನಾಲ್ಕು ಕೋಟಿ ರೂ. ಇತ್ತು. ಅದರಲ್ಲಿ ಬ್ರಿಟಿಷರಿಗೆ ಪೊಗದಿಯಾಗಿ 24 ಲಕ್ಷ, ಅರಮನೆ ಖರ್ಚಿಗೆ 26 ಲಕ್ಷ. ಉಳಿದ ಹಣವೆಲ್ಲವೂ ನಾಡಿನ ಅಭಿವೃದ್ಧಿಗೆ ವ್ಯಯವಾಗುತ್ತಿತ್ತು.
- ಮೈಸೂರಿನ ಆಡಳಿತದಲ್ಲಿ ಮಿತವ್ಯಯವು ಮುಖ್ಯವಾಗಿ ಎದ್ದು ಕಾಣಿಸುತ್ತಿತ್ತು. ಅಧಿಕಾರಿಗಳಿಗೆ ಕೊಡುತ್ತಿದ್ದ ಸಂಬಳವೂ ಕಡಿಮೆ, ಅವರ ಸಂಖ್ಯೆಯೂ ಮಿತಿಯಾಗಿದ್ದಿತು. ಬ್ರಿಟಿಷ್ ಅಧಿಕಾರಿಗಳ ಆಡಳಿತದ ಪ್ರಾಂತ್ಯಗಳಲ್ಲಿದ್ದುದಕ್ಕಿಂತ ಬಹಳ ಕಡಿಮೆ. ಆದರೆ ದಕ್ಷತೆಯಲ್ಲಿ ಯಾರಿಗೂ ಕಡಿಮೆ ಇರಲಿಲ್ಲ. ಅಧಿಕಾರವನ್ನು ದುರುಪಯೋಗಪಡಿಸಿ ಅಕ್ರಮವಾದ ಭ್ರಷ್ಟಾಚಾರಕ್ಕೆ ಕೈಹಾಕುತ್ತಿರಲಿಲ್ಲ. ಅಬ್ಕಾರಿ, ಪೋಲೀಸು ಮುಂತಾದ ಇಲಾಖೆಗಳ ಕೆಳದರ್ಜೆಯ ನೌಕರಿಯಲ್ಲಿ ಸ್ವಲ್ಪಮಟ್ಟಿಗೆ ಲಂಚಗುಳಿತನವು ಇದ್ದರೂ, ಮೇಲ್ಮಟ್ಟದ ಅಧಿಕಾರಿಗಳು ಮತ್ತು ಗೆಜೆಟೆಡ್ ಆಫೀಸರುಗಳು ಬಹುಮಟ್ಟಿಗೆ ನೀತಿವಂತರಾಗಿ ಮತ್ತು ಸತ್ಯಶೀಲರಾಗಿ ನಡೆಯುತ್ತಿದ್ದರು.
- ಆಡಳಿತದ ಅನುಭವ ಪಡೆಯಲು ಹೊರಗಡೆಯಿಂದ ಅನೇಕರು ಮೈಸೂರಿಗೆ ಬಂದು ನಮ್ಮ ಸರಕಾರದ ಸೆಕ್ರೆಟೇರಿಯೆಟಿನಲ್ಲಿ ಶಿಕ್ಷಣ ಪಡೆಯುತ್ತಿದ್ದರು.
- ಆಗ ಕೇಂದ್ರಸರ್ಕಾರದಿಂದಾಗಲೀ, ಬ್ರಿಟಿಷ್ ಸರ್ಕಾರದಿಂದಾಗಲೀ, ಪರದೇಶಗಳಿಂದಾಗಲೀ ಯಾವ ಆರ್ಥಿಕ ಸಹಾಯ ಸಿಗುತ್ತಿರಲಿಲ್ಲ. ಶಿವನಸಮುದ್ರ, ವಾಣಿವಿಲಾಸ ಸಾಗರ, ಕೃಷ್ಣರಾಜ ಸಾಗರ, ಭದ್ರಾವತಿ ಕಬ್ಬಿಣ ಕಾರ್ಖಾನೆ, ಜೋಗ ಜಲಪಾತ ಈ ಎಲ್ಲ ಯೋಜನೆಗಳನ್ನೂ ಸಂಪೂರ್ಣವಾಗಿ ರಾಜ್ಯದ ಸ್ವಂತ ಬಂಡವಾಳದಿಂದಲೇ ಪೂರೈಸಲಾಯಿತು. ಮಿತವಾದ ಆದಾಯದಿಂದ ಗಮನಾರ್ಹವಾದ ಅಭಿವೃದ್ಧಿ ಕಾರ್ಯಗಳನ್ನು ಮಾಡಲಾಯಿತು.
- ಖರ್ಚು ಆದಾಯಕ್ಕಿಂತ ಸಾಧ್ಯವಾದಷ್ಟು ಕಮ್ಮಿ ಇರಬೇಕು ಮತ್ತು ಹಣ ಪೋಲಾಗಕೂಡದು ಎಂಬುದು ಆಗಿನ ಹಣಕಾಸಿನ ನೀತಿಯಾಗಿತ್ತು. ನೌಕರರ ಮತ್ತು ಸಿಬ್ಬಂದಿಯ ಖರ್ಚು ಬಹಳ ಕಡಿಮೆ ಇದ್ದಿತು. ಆದಾಯಕ್ಕಿಂತಲೂ ಖರ್ಚು ಜಾಸ್ತಿಯಾಗುವ ಸಂಭವ ಕಂಡ ಕೂಡಲೆ, ಖರ್ಚು ಕಡಿಮೆ ಮಾಡಲು ಕಾರ್ಯಕ್ರಮಗಳನ್ನು ತೆಗೆದುಕೊಂಡು ಖರ್ಚನ್ನು ಸರಿದೂಗಿಸಲಾಗುತ್ತಿತ್ತು.
- ಒಮ್ಮೆ ರಾಜ್ಯದ ವರಮಾನಕ್ಕಿಂತ ಖರ್ಚು ಜಾಸ್ತಿಯಾಗುವ ಸೂಚನೆ ಕಂಡುಬಂದಿದ್ದರಿಂದ ಕೂಡಲೇ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಯಾವ ಯಾವ ಇಲಾಖೆಗಳಲ್ಲಿ ಖರ್ಚು ಕಡಿಮೆ ಮಾಡಬಹುದೆಂದು ಪರಿಶೀಲಿಸಿ ವರದಿ

ಸಲ್ಲಿಸಲು ಕೇಳಲಾಯಿತು. ಸಮಿತಿಯು ಸಲ್ಲಿಸಿದ ಹಲವು ಸಲಹೆಗಳಲ್ಲಿ ನೂರು ರೂ. ಗಳಿಗಿಂತ ಹೆಚ್ಚು ಸಂಬಳ ಪಡೆಯುವ ಸರ್ಕಾರಿ ನೌಕರರ ವೇತನದಲ್ಲಿ ಶೇಕಡ 10 ರೂ. ಕಡಿಮೆ ಮಾಡಬೇಕೆಂಬುದೂ ಒಂದಾಗಿತ್ತು. ಅದರಂತೆ ಎಲ್ಲ ಅಧಿಕಾರಿಗಳೂ ಸಂತೋಷದಿಂದ ಒಪ್ಪಿ ಕಡಿಮೆ ಸಂಬಳ ಪಡೆದರು. ಎರಡು ಮೂರು ವರ್ಷಗಳಲ್ಲಿ ಸರ್ಕಾರದ ಖೋತಾ ಬಜೆಟ್ಟನ್ನು ಸರಿದೂಗಿಸಲಾಯಿತು.

- ಮೈಸೂರಿನ ಆರ್ಥಿಕ ಭದ್ರತೆಗೆ ಮಿತವಾದ ಸಂಬಳವಲ್ಲದೆ ಆಡಳಿತಕ್ಕಾಗಿ ನೇಮಕವಾದ ಸಿಬ್ಬಂದಿಯ ಸಂಖ್ಯೆಯೂ ಮಿತವಾಗಿದ್ದುದು ಕಾರಣ. 1941 ರವರೆಗೆ ಇಬ್ಬರು ಸಚಿವರು ಆಡಳಿತವನ್ನು ನಡೆಸುತ್ತಿದ್ದರು. ಪ್ರಾಂತೀಯ ಅಧಿಕಾರಿಗಳು, ಡೆಪ್ಯೂಟಿ ಕಮೀಷನರ್‌ಗಳು ಮುಂತಾದ ಅಧಿಕಾರಿಗಳ ಸಂಖ್ಯೆಯೂ ಕಡಿಮೆ ಇದ್ದಿತು. ಒಬ್ಬ ಅಧಿಕಾರಿಯನ್ನು ಹೆಚ್ಚಿಸಬೇಕಾದರೂ ಅವರಿಗೆ ಸಾಕಷ್ಟು ಕೆಲಸವಿದೆಯೇ ಎಂಬ ವಿಷಯವು ನಿರ್ಧಾರವಾದ ಮೇಲೆಯೇ ನೇಮಕ ಮಾಡುತ್ತಿದ್ದರು. ಆಗ ಮಂತ್ರಿಗಳ ಸಂಚಾರ ಕಡಿಮೆ ಇರುತ್ತಿದ್ದಿತು. ತಿಂಗಳಿಗೆ 200/300 ರೂಪಾಯಿಗಳಿಗಿಂತ ಜಾಸ್ತಿ ಭತ್ಯವಿರುತ್ತಿರಲಿಲ್ಲ. ಮಂತ್ರಿಗಳು ಅವರ ಸ್ವಂತ ಮನೆ, ಸ್ವಂತ ಕಾರು, ಸ್ವಂತ ಫರ್ನಿಚರ್ ಇತ್ಯಾದಿ ಎಲ್ಲ ಅನುಕೂಲತೆಗಳನ್ನೂ ಅವರೇ ಮಾಡಿಕೊಳ್ಳಬೇಕಾಗಿತ್ತು. ಪ್ರಾರಂಭೋತ್ಸವ, ಸಪ್ತಾಹ, ವನಮಹೋತ್ಸವ, ಸಂಸ್ಕೃತಿ ಪ್ರಸಾರ ಮುಂತಾದ ಆಡಂಬರದ ಯೋಜನೆಗಳಿಗೆ ಹಣವು ವ್ಯಯವಾಗುತ್ತಿರಲಿಲ್ಲ. ಪ್ರತಿಯೊಂದು ಕಾಸೂ ಸದ್ವಿನಿಯೋಗವಾಗುತ್ತಿತ್ತು. ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ಜನಗಳಿಗೆ ಹಲವು ಸೌಕರ್ಯಗಳನ್ನು ಕಲ್ಪಿಸಿಕೊಟ್ಟು "ಮಾದರಿ ಮೈಸೂರು" ಎನ್ನಿಸಿಕೊಳ್ಳುವಂತೆ ಮಾಡಿದರು.

- ಹಿಂದಿನ ಮಹಾರಾಜರ ಅಥವಾ ದಿವಾನರುಗಳ ಕಾಲದಲ್ಲಿ ಶಂಕುಸ್ಥಾಪನೆ, ಪ್ರಾರಂಭೋತ್ಸವ, ಉದ್ಘಾಟನೆ ಮುಂತಾದ ಆಡಂಬರಗಳಿರಲಿಲ್ಲ. ಅವರ ಆಡಳಿತದಲ್ಲಿ ಅನೇಕ ಕಟ್ಟಡಗಳೂ, ಸಾವಿರಾರು ಕೆರೆಗಳೂ ನಿರ್ಮಾಣವಾಗಿವೆ. ಅವುಗಳಿಗೆಲ್ಲಾ ದಿವಾನರಾಗಲಿ, ಸಚಿವರುಗಳಾಗಲಿ ಅಡಿಗಲ್ಲು ಹಾಕಿರುವ ಗುರುತುಗಳಿಲ್ಲ. ಶಿವನಸಮುದ್ರ, ವಿಕ್ಟೋರಿಯಾ ಆಸ್ಪತ್ರೆ, ಅಠಾರ ಕಚೇರಿ, ಕೃಷ್ಣರಾಜಸಾಗರ, ವಾಣಿವಿಲಾಸ ಸಾಗರ, ಸೆಂಟ್ರಲ್ ಕಾಲೇಜು, ಚಿತ್ರದುರ್ಗ ಟೌನ್‌ಹಾಲ್ ಇತ್ಯಾದಿ ನೂರಾರು ಸರ್ಕಾರಿ ಕಟ್ಟಡಗಳು ಶಂಕುಸ್ಥಾಪನೆ ಇಲ್ಲದೆಯೇ ಕಟ್ಟಲ್ಪಟ್ಟಿವೆ. ಯಾವ ಡಂಭಾಚಾರದ ಉತ್ಸವವೂ ಇಲ್ಲದೆ ಪ್ರಾರಂಭವಾಗಿವೆ.

**ಇಂದಿನ ಪ್ರಜಾಪ್ರಭುತ್ವ ಕುರಿತು:**

- ಪ್ರಜಾಪ್ರಭುತ್ವ ಬಂದ ನಂತರ ಈ ಮಹೋತ್ಸವಗಳು, ಆಡಂಬರಗಳು ತೀವ್ರವಾದ ಜಾಡ್ಯದ ರೂಪ ತಾಳಿವೆ. ಶಂಕುಕಲ್ಲು, ಅಡಿಗಲ್ಲು, ಮೂಲೆಕಲ್ಲುಗಳ ಪ್ರಾರಂಭೋತ್ಸವ, ಉದ್ಘಾಟನೆ, ಮುಕ್ತಾಯ ಸಮಾರಂಭ, ಸೆಮಿನಾರ್ ಇವೇ ಮೊದಲಾದ ಹೊಸ ರೀತಿಯ ಆಡಂಬರಗಳು ಜನ್ಮ ತಾಳಿವೆ. ಕಾರ್ಯ ಚಟುವಟಿಕೆ ಕಡಿಮೆಯಾಗಿ ಮಾತಿನ ಚಟುವಟಿಕೆ ಜಾಸ್ತಿಯಾಗಿದೆ. ಸಚಿವರನ್ನು ಗೌರವಿಸಲು ಈ ಸಂಭ್ರಮವನ್ನು ಏರ್ಪಾಡು ಮಾಡುತ್ತಾರೆ. ತಿಂಡಿ ತೀರ್ಥಗಳು ಜರುಗಿ ಕೊನೆಯಲ್ಲಿ ಈ ಯೋಜನೆಗಳೆಲ್ಲಾ ಮೃಷ್ಟಾನ್ನ ಭೋಜನಗಳಲ್ಲಿ ಮುಕ್ತಾಯವಾಗುತ್ತವೆ. ಯೋಜನೆಯ ಭವಿಷ್ಯವು ಅನಿಶ್ಚಿತ. ಅನೇಕ ಕಾಮಗಾರಿಗಳಿಗೆ ಹಾಕಿದ ಶಂಕು ಕಲ್ಲುಗಳು ಇಂಜಿನಿಯರಿಂಗ್ ಆಫೀಸಿನಲ್ಲಿಯೋ, ಪಂಚಾಯಿತಿ ಆಫೀಸಿನಲ್ಲಿಯೋ ಆಕಾಶವನ್ನು ನೋಡುತ್ತಾ ಬಿದ್ದಿವೆ.

- ಪ್ರಜಾಪ್ರಭುತ್ವವು ನೀತಿಯುಕ್ತವಾಗಿದ್ದು, ಸತ್ಯದಿಂದ ಕೂಡಿದ್ದರೆ ಪ್ರಜೆಗಳು ಸುಖಶಾಂತಿಗಳಿಂದಿರುತ್ತಾರೆ. ಹಾಗಿಲ್ಲದಿದ್ದರೆ ಜನ ಕಷ್ಟಕ್ಕೆ ಈಡಾಗಿ ಅನಾಯಕತೆ ತಲೆದೋರುತ್ತದೆ. ಪ್ರಜಾಪ್ರಭುತ್ವವು ಯಶಸ್ವಿಯಾಗಬೇಕಾದರೆ ಪ್ರಜೆಗಳು ಸುಸಂಘಟಿತರಾದ ಜನಾಂಗವಾಗಿರಬೇಕು. ಶಿಸ್ತು ಮತ್ತು ಸತ್ಯಗಳೇ ಪ್ರಜಾಪ್ರಭುತ್ವದ ತಳಹದಿ.

- ಭಾರತದಲ್ಲಿರತಕ್ಕ ಪ್ರತಿಯೊಬ್ಬ ಪ್ರಜೆಯೂ ಯಾವ ಜನಾಂಗ ಅಥವಾ ಪಕ್ಷಕ್ಕೆ ಸೇರಿರಲಿ ತಾನು ಭಾರತದ ಪ್ರಜೆಯೆಂದು ಮನಸ್ಸಿನಲ್ಲಿಟ್ಟುಕೊಂಡು ನಡೆದರೆ ಕ್ಷೇಮ.

- ಭಾರತದ ಪ್ರಜಾಪ್ರಭುತ್ವ ಬಾಲ್ಯಾವಸ್ಥೆಯಲ್ಲಿದೆ. ಈ ಪ್ರಜಾಪ್ರಭುತ್ವದ ರಾಜ್ಯಸೂತ್ರಗಳನ್ನು ವಹಿಸಲು ತಮಗೆ ಯೋಗ್ಯತೆ ಇರಲಿ ಇಲ್ಲದಿರಲಿ, ಅನೇಕರು ಮುಂದೆ ಬರುತ್ತಿದ್ದಾರೆ. ಪ್ರಜೆಗಳಿಗೆ ನಿರೀಕ್ಷಿಸಿದಷ್ಟು ಸುಖಸೌಕರ್ಯಗಳು ದೊರೆಯುತ್ತಿಲ್ಲ.

- ಆಡಳಿತ ಸೂತ್ರವನ್ನು ಹಿಡಿದಿರುವ ಸಚಿವರ ವಿಷಯವಾಗಿ ಕಾಂಗ್ರೆಸ್ ಪ್ರೆಸಿಡೆಂಟರಾಗಿದ್ದ ಸಂಜೀವಯ್ಯನವರು ಈ ರೀತಿ ಹೇಳುತ್ತಾರೆ: "ಹಿಂದಿನ ಭಿಕಾರಿಗಳು ಈಗ ಕೋಟ್ಯಾಧೀಶರಾಗಿದ್ದಾರೆ". ಇದು ಸತ್ಯ.

ಇಮಾಂರವರು ಭ್ರಷ್ಟಾಚಾರವನ್ನು ಕುರಿತು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವ ಅಂದಿನ ವಿಧಾನಸಭಾ ಸದಸ್ಯೆ ನಾಗರತ್ನಮ್ಮ ಹಿರೇಮಠ ಅವರು ಸದನದಲ್ಲಿ ಹಾಡಿದ ಕವಿತೆ ತುಂಬಾ ಮನನೀಯವಾಗಿದೆ:

**ಸರಕಾರಿ ಕೋಠಿಯಲ್ಲಿದ್ದ ಅಕ್ಕಿ**
**ಮಧ್ಯರಾತ್ರಿಗೆ ತಿಂದು ಹಾಕಿದವು ಹಕ್ಕಿ**

**ಈ ರೀತಿ ವರದಿ ಮಾಡಿದ ಹರಿಕಾರ**
**ನಿಜವೆಂದು ನಂಬಿತು ಸರಕಾರ**

**ಹುಚ್ಚಿಯ ಮದುವೆಯಲ್ಲಿ ಉಂಡವನೆ ಜಾಣ**
**ಎಣ್ಣೆ ಬಂದಾಗ ಕಣ್ಣುಮುಚ್ಚಿದವನೇ ಕೋಣ**

**ನಾಳೆ ನಮ್ಮ ಕಡೆ ಮಂತ್ರಿಗಳ ಸವಾರಿ**
**ಇಂದು ರಸ್ತೆ ಸೇತುವೆಗಳ ರಿಪೇರಿ**

**ಅವನಿಲ್ಲಿ ಬಂದಾಗ ತುಂಡು ಪಂಚೆ ಇತ್ತು**
**ಇರಲಿಕ್ಕೆ ಮಣ್ಣಿನ ಜೋಪಡಿ ಇತ್ತು**

**ಅವನ ಮಹಡಿಯ ಎದುರು ಹದಿನೈದು ಲಾರಿ**
**ಕಂಟ್ರಾಕ್ಟುದಾರನಾಗಿ ನಾಡಿಗೆ ಮಾರಿ**

**ಅವರೆಕಾಳನು ತಿಂದು ಆರು ದಿನ ಕಳೆದೆ**
**ನೌಕರಿಯ ದೊರಕಿಸಲು ಎಲ್ಲೆಲ್ಲೋ ಅಲೆದೆ**

**ರಾಜಕೀಯ ಸೇರಿ ಮುಂದೆ ಬಾರೋ ಕಂತ್ರಿ**
**ಎಂದು ಹೇಳಿದನೊಬ್ಬ ಮಾಜಿ ಮಂತ್ರಿ!**

**21.7.2010**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑